# ಉಸಿರಿನ ಕೊನೆ ಕ್ಷಣದ ತನಕ ನಟಿಸಬೇಕು



**ವಿಕಾಸ್ ಕೆ.ಪಿ.**

**ಕಲರ್ಸ್ ಕನ್ನಡದ ‘ಕುಲವಧು’ವಿನ ಡಾ.ನಿಖಿಲ್**

★ *ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ...*

ನೆಗೆಟಿವ್ ಛಾಯೆ ಇರುವ ಪಾತ್ರ. ಇದಕ್ಕಿಂತ ಮುಂಚೆ ‘ಮಿಲನ’ದಲ್ಲಿ ಹರ್ಷನಾಗಿದ್ದೆ. ಅದು ತುಂಬಾ ಮುಗ್ಧ ಸ್ವಭಾವದ ಪಾತ್ರವಾಗಿತ್ತು. ದೈಹಿಕವಾಗಿ ಲವರ್ ಬಾಯ್ ತರಾನೆ ಕಾಣಿಸುವುದರಿಂದ ಅಂತಹ ಪಾತ್ರ ನನಗೆ ಹೆಚ್ಚು ಒಪ್ಪುತ್ತವೆ. ಅದು ತುಂಬಾ ಸರಳ ಪಾತ್ರ. ಈಗಲೂ ಜನ ಹರ್ಷನ ಪಾತ್ರವನ್ನು ಮರೆತಿಲ್ಲ. ನಿಖಿಲ್ ಆಗಿ ಕಾಣಿಸಿಕೊಳ್ಳುವಾಗ ಕೋಪ–ಆಕ್ರೋಶವನ್ನು ಹೊರಹೊಮ್ಮಿಸುವುದು ಜನರಲ್ಲಿ ಬೆರಗನ್ನು ಹುಟ್ಟಿಸಿದೆ. ಎರಡನ್ನೂ ನೋಡಿದವರು ನನ್ನ ಅಭಿನಯವನ್ನು ತೌಲನಿಕವಾಗಿ ನೋಡುತ್ತಾರೆ. ‘ಹೇಗೆ ಇಷ್ಟು ಭಿನ್ನ ಪಾತ್ರವನ್ನು ನಟಿಸಲು ಸಾಧ್ಯ’ ಎಂದು ಕೇಳುತ್ತಾರೆ. ಜನರ ಈ ಪ್ರತಿಕ್ರಿಯೆಗಳು ನನಗೆ ಸಮಾಧಾನವನ್ನು ತಂದುಕೊಟ್ಟಿದೆ. ತುಂಬಾ ವಿರೋಧ ಸ್ವಭಾವದ ಪಾತ್ರಗಳನ್ನು ನಿರ್ವಹಿಸುವುದರಿಂದ ನಟನಾಗಿ ಪೂರ್ಣವಾಗಬಹುದು.

★ *ನಟನೆಯ ಮನೋಭೂಮಿಕೆ ನಿಮ್ಮಲ್ಲಿ ಹೇಗೆ ಸಿದ್ಧವಾಯಿತು?*

ಇದಕ್ಕೆ ಯಾರ ಪ್ರೇರಣೆ– ಪ್ರಭಾವವೂ ಇಲ್ಲ. ಬಾಲ್ಯದಿಂದಲೂ ನನಗೆ ಸಿನಿಮಾ ನೋಡುವ ಅಭ್ಯಾಸ ಇದೆ. ಮನೆಯಲ್ಲಿ ನಾನೊಬ್ಬನೇ ಇದ್ದಾಗಲೂ ಹಾಡಿನ ಕ್ಯಾಸೆಟ್ ಹಾಕಿಕೊಂಡು ಡಾನ್ಸ್ ಮಾಡುತ್ತಿದ್ದೆ. ಆಗಲೇ ನನ್ನಲ್ಲಿ ನಟನಾಗಬೇಕು ಎನ್ನುವ ಆಸೆ ಹುಟ್ಟಿತ್ತು. ಈಗ ನನಗೆ ನಟನೆ ಬಿಟ್ಟು ಬೇರೆ ಯಾವ ಕೆಲಸವೂ ಗೊತ್ತಿಲ್ಲ. ಉಸಿರಿನ ಕೊನೆ ಕ್ಷಣದವರೆಗೂ ನಟಿಸುತ್ತಲೇ ಇರಬೇಕು ಎನ್ನುವುದು ನನ್ನ ಬಯಕೆ.

★ *ನಟನಾಗಿ ಸಿದ್ಧಗೊಂಡಿದ್ದು ಹೇಗೆ?*

ಮೂಲತಃ ನಾನು ರಂಗಭೂಮಿ ವಿದ್ಯಾರ್ಥಿ. ನನ್ನ ಮೊದಲ ಗುರು ಮಂಡ್ಯ ರಮೇಶ್, ಅವರ ‘ನಟನಾ’ ತಂಡದಲ್ಲಿ ಇದ್ದೆ. ಹಲವಾರು ನಾಟಕಗಳನ್ನು ಆಡಿದೆ. ಅವರ ಸಲಹೆಯಂತೆ ‘ನೀನಾಸಂ’ನಲ್ಲಿ ರಂಗ ಶಿಕ್ಷಣಕ್ಕೆ ಹೋದೆ. ನಾಲ್ಕುನೂರು ರಂಗಾಸಕ್ತರಲ್ಲಿ ಕೇವಲ 25 ಮಂದಿಯನ್ನು ಆಯ್ಕೆ ಮಾಡುತ್ತಾರೆ. ನಾನು ಮೊದಲ ಪ್ರಯತ್ನದಲ್ಲಿಯೇ ಆಯ್ಕೆಯಾದೆ. ಅದಾದ ಮೇಲೆ ರಂಗ ತಾಲೀಮಿನ ಜೊತೆಗೆ ಸಿನಿಮಾ ಪ್ರವೇಶ ಮಾಡಿ ಪೂರ್ಣಾವಧಿ ನಟನಾಗಿ ರೂಪಿತಗೊಂಡಿದ್ದೇನೆ.

★ *ಕ್ಯಾಮೆರಾ ಎದುರಿಸಿದ ಮೊದಲ ದಿನಗಳು ಹೇಗಿದ್ದವು?*

ರಂಗ ಚಟುವಟಿಕೆಯಲ್ಲಿ ಪಳಗಿದ್ದರಿಂದ ನಟನೆ ಕಷ್ಟ ಅನ್ನಿಸಲೇ ಇಲ್ಲ. ಧಾರಾವಾಹಿಗಳಿಗಿಂತ ಮೊದಲು ಸಿನಿಮಾದಲ್ಲಿ ನಟಿಸಿದೆ. ಮೊದಲು ಕ್ಯಾಮೆರಾ ಎದುರಿಸಿದ್ದು ‘ಸ್ನೇಹನಾ ಪ್ರೀತಿನಾ’ ಸಿನಿಮಾದಲ್ಲಿ. ನಂತರ ‘ಝಂಡಾ’ ‘ಪೃಥ್ವಿ’ ‘ತೀರ್ಥ’ ‘ಮಳೆ’ಯಲ್ಲಿ ಅಭಿನಯಿಸಿದೆ. ಅದಾದ ನಂತರ ಉದಯದ ‘ಸೀತೆ’ ನನ್ನ ಮೊದಲ ಧಾರಾವಾಹಿ. ಹಲವಾರು ಭಿನ್ನ ಪಾತ್ರಗಳಲ್ಲಿ ನಟಿಸಿದ್ದೇನೆ. ಆದರೂ ಪಾತ್ರಗಳ ಹುಡುಕಾಟ ಮುಂದುವರಿದಿದೆ. ನನ್ನ ಪರಿಶ್ರಮ ನೋಡಿದರೆ ನಾನು ಅಷ್ಟು ಅದೃಷ್ಟವಂತ ಅಲ್ಲ ಎಂದು ನನಗೆ ಅನ್ನಿಸಿದೆ.

★ *ರಂಗಭೂಮಿ, ಸಿನಿಮಾ, ಟಿವಿ ಇದರಲ್ಲಿ ನಿಮ್ಮ ಆಯ್ಕೆ ಯಾವುದು?*

ಖುಷಿ ಕೊಡುವುದು ರಂಗಭೂಮಿಯೇ. ನಾಟಕದಲ್ಲಿ ತೃಪ್ತಿಯಿದೆ. ಎರಡು ಗಂಟೆಯ ಹೊತ್ತು ಯಾವುದೋ ಒಂದು ನಾಟಕಕ್ಕೆ ತಾಲೀಮು ಮಾಡಿದರೂ ಏನೋ ಕೆಲಸ ಮಾಡಿದ್ದೇನೆ ಎನ್ನುವು ಭಾವ ಪ್ರಾಪ್ತವಾಗುತ್ತದೆ. ಅವತ್ತು ಆಗುವ ಸಂತೋಷ ಅಷ್ಟಿಷ್ಟಲ್ಲ. ಇದು ನನ್ನ ವೈಯಕ್ತಿಕ ಅನುಭವ. ಇದೇ ರೀತಿ ಹಲವರಿಗೆ ಅನ್ನಿಸಬಹುದು. ಇಲ್ಲಿನ ದೊಡ್ಡ ಸವಾಲು ಏನೆಂದರೆ ಜೀವನ ನಿರ್ವಹಣೆ ತುಂಬಾ ಕಷ್ಟ. ನಟನೆಯನ್ನೇ ಬದುಕಾಗಿ ಸ್ವೀಕರಿಸಿದವರಿಗೆ ಸಿನಿಮಾ– ಟಿವಿ ಅನಿವಾರ್ಯವಾಗುತ್ತವೆ. ಆರ್ಥಿಕ ಅನುಕೂಲಗಳು ರಂಗಭೂಮಿಯಲ್ಲಿ ತುಂಬಾ ಕಡಿಮೆ. ಹವ್ಯಾಸವಾಗಿ ರಂಗಭೂಮಿಯನ್ನು ಇಟ್ಟುಕೊಂಡು ವೃತ್ತಿಯಾಗಿ ಸಿನಿಮಾ, ಧಾರಾವಾಹಿ ಆಯ್ಕೆ ಮಾಡಿಕೊಳ್ಳುವೆ.

★ *ಮುಂದಿನ ಗುರಿ– ಉದ್ದೇಶಗಳು..*

ಆ ಬಗ್ಗೆ ಯಾವುದೇ ಅನುಮಾನ ಇಲ್ಲ. ನಟನಾಗಿಯೇ ಬೆಳೆಯಬೇಕು. ಬೇರೆ ಯಾರದೋ ಒತ್ತಾಯಕ್ಕೋ ಅಥವಾ ಹೆಸರಿಗೋ.. ದುಡ್ಡಿಗಾಗಿಯೋ ನಾನು ಬಂದಿಲ್ಲ. ನಟನೇ ಆಗಬೇಕು ಎಂದು ಬಂದಿದ್ದೇನೆ. ವೃತ್ತಿ, ಹವ್ಯಾಸ ಎಲ್ಲದೂ ಅಭಿನಯ. ಇದನ್ನು ಬಿಟ್ಟು ಬೇರೆ ಏನನ್ನೂ ಯೋಚಿಸುವುದಿಲ್ಲ. ನಟನಾಗಿ ಸ್ವಲ್ಪ ಮಟ್ಟಿಗೆ ನನ್ನನ್ನು ಗುರುತಿಸಿಕೊಂಡಿದ್ದೇನೆ. ಪೂರ್ಣಪ್ರಮಾಣದಲ್ಲಿ ಗುರುತಿಸಿಕೊಳ್ಳಬೇಕು ಎನ್ನುವ ಹಂಬಲ ಇದೆ. ಇಲ್ಲಿ ನಾನು ಸಂಪಾದನೆ ಮಾಡದಿದ್ದರೂ ಖುಷಿಯಿಂದ ಇರುತ್ತೇನೆ. ಜೀವನ ನಡೆದರೆ ಸಾಕು.

■ **ರಾಘವೇಂದ್ರ**